ಶ್ರೀ ಬಿ. ರಾಚಯ್ಯ (ಶಿಕ್ಷಣ ಮಂತ್ರಿಗಳು).—

(ಅ) ವರ್ತೂರು ಕ್ಷೇತ್ರದಲ್ಲಿ ಒಂದು ಕಿರಿಯ ಸರ್ಕಾರಿ ಕಾಲೇಜು ಮಾತ್ರ ವರ್ತೂರಿನಲ್ಲಿ ಇದ್ದು ಅದರಲ್ಲಿ ಓದುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ: 102.

1 ನೇ ವರ್ಷದ ಪಿ.ಯು.ಸಿ. 62 2 ನೇ ವರ್ಷದ ಪಿ.ಯು.ಸಿ. 40

(ಆ) ಇಲ್ಲಿ ಒಂದು ಕಿರಿಯ ಕಾಲೇಜು ಮಾತ್ರವಿದ್ದು ಅದು ವರ್ತೂರಿನಲ್ಲಿ ಇರುತ್ತದೆ.

(ಇ) ಖಾಸಗಿ ಮತ್ತು ಸರ್ಕಾರದವರಿಂದ ಹೊಸ ಕಾಲೇಜುಗಳನ್ನು ತೆಗೆಯುವ ಬಗ್ಗೆ ಇಲಾಖೆಯಿಂದ ಯಾವ ಪ್ರಸ್ತಾವನೆಯೂ ಇರುವುದಿಲ್ಲ.

ವಿಷಯ: ಕರ್ನಾಟಕ ರಾಜ್ಯ ತೋಟಗಾರಿಕೆ ಇಲಾಖೆಯ ಆಶ್ರಯದಲ್ಲಿ ಬೆಳೆಸುತ್ತಿರುವ ತೋಟಗಳು.

ಪ್ರ. 109 (31) ಶ್ರೀ ಬಿ. ಬೈರಪ್ಪಾಜಿ (ತುರುವೇಕೆರೆ).—ತೋಟಗಾರಿಕೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ.—

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 31 (ಸಿ). ಸದಸ್ಯರ ಹೆಸರು: ಶ್ರೀ ಬಿ. ಬೈರಪ್ಪಾಜಿ

(ಅ) ರಾಜ್ಯದ ತೋಟಗಾರಿಕೆ ಇಲಾಖೆಯು ವತಿಯಿಂದ ಪ್ರತಿ ತಾಲ್ಲೂಕಿನ ಯಾವ ಗ್ರಾಮಗಳಲ್ಲಿ ಎಷ್ಟು ಎಕರೆ ಪ್ರದೇಶದಲ್ಲಿ ತೋಟಗಳನ್ನು ಬೆಳೆಸುತ್ತಿದ್ದಾರೆ ;

(ಆ) ತೋಟಗಳಲ್ಲಿ ಬೆಳೆಯುತ್ತಿರುವ ಹಣ್ಣು ಹಾಗೂ ಇತರ ಪದಾರ್ಥಗಳನ್ನು ಮಾರಾಟ ಮಾಡಲು ಅನುಸರಿಸುತ್ತಿರುವ ಕ್ರಮಗಳೇನು ಹಾಗೂ ತೋಟದಿಂದ 1980–81, 1981–82, 1982–83 ನೇ ಸಾಲಿನಲ್ಲಿ ಬಂದ ವಾರ್ಷಿಕ ಆದಾಯವೆಷ್ಟು ಹಾಗೂ ಪ್ರತಿ ಫಾರಂನ ವಾರ್ಷಿಕ ಖರ್ಚೆಷ್ಟು ;

(ಇ) ಅನೇಕ ತೋಟಗಳು ಇತ್ತೀಚೆಗೆ ವ್ಯವಸ್ಥಿತವಾಗಿ ಅಭಿವೃದ್ಧಿಪಡಿಸದೇ ಇರುವುದು ಹಾಗೂ ಆದಾಯ ಕಡಿಮೆಯಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ;

(ಈ) ಹಾಗಿದ್ದರೆ ಇದನ್ನು ಸರಿಪಡಿಸಲು ಸರಕಾರದವರು ಕ್ರಮ ಕೈಗೊಳ್ಳುವರೇ ?

ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್ (ಪಶುಸಂಗೋಪನೆ, ಪಶುವೈದ್ಯ ಮತ್ತು ತೋಟಗಾರಿಕೆ ಮಂತ್ರಿಗಳು).—

(ಅ) ಪ್ರತಿ ತಾಲ್ಲೂಕುಗಳಲ್ಲಿ ತೋಟಗಾರಿಕೆ ಇಲಾಖೆಯ ವತಿಯಿಂದ ಅಭಿವೃದ್ಧಿಪಡಿಸಲು ತೆಗೆದುಕೊಂಡಿರುವ ತೋಟಗಳ ವಿಸ್ತೀರ್ಣವನ್ನು (ಗ್ರಾಮಗಳ ವಿವರ ಸಹಿತ) ಸೂಚಿಸುವ ಪಟ್ಟಿಯನ್ನು ಲಗ್ತೀಕರಿಸಲಾಗಿದೆ.

(ಆ) ತೋಟಗಳಲ್ಲಿ ಬೆಳೆಸುತ್ತಿರುವ ಹಣ್ಣು ಹಾಗೂ ಇತರ ಪದಾರ್ಥಗಳ ಮಾರಾಟವು ಬಹಿರಂಗವಾದ ಹರಾಜು ಮತ್ತು ಮೊಹರಾದ ಟೆಂಡರಿನ ಮೂಲಕ ನಡೆಸಲಾಗುವುದು.

ಈ ಎಲ್ಲಾ ತೋಟಗಳ ಅಭಿವೃದ್ಧಿಗೆ 1980–81 ನೇ ಸಾಲಿಗೆ 93,74,156 ರೂ. ಗಳು ವೆಚ್ಚವಾಗಿದ್ದು ಆದಾಯವು ರೂ. 95,38,443·00 ಆಗಿದೆ.

1981–82, 1982–83 ನೇ ಸಾಲಿನ ವಾರ್ಷಿಕ ಆದಾಯ ಮತ್ತು ಖರ್ಚಿನ ಸರಿಯಾದ ವಿವರಗಳನ್ನು ಇಲಾಖೆಯು ಪಡೆಯಬೇಕಿದ್ದು, ಮರುತಾಳೆ ನಡೆಸಿ ಮಾಹಿತಿಯನ್ನು ನೀಡಬಹುದಾಗಿದೆ.

(ಇ) ಕೆಲವೊಂದು ನಿದರ್ಶನಗಳು ಬಂದಿವೆ.

(ಈ) ಆಗತ್ಯವಾಗಿ ಸೂಕ್ತ ಕ್ರಮವನ್ನು ಕೈಗೊಳ್ಳಲಾಗುವುದು. ಉದಾಹರಣೆಗಾಗಿ ಕೆಲವೊಂದು ತೋಟಗಾರಿಕಾ ಕ್ಷೇತ್ರಗಳ ಕಾರ್ಯನಿರ್ವಹಣೆಯನ್ನು ಪುನರ್‌ಪರಿಶೀಲಿಸಿ, ಅವು ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿ ದೃಷ್ಟಿಯಲ್ಲಿ ಪರಿಣಾಮಕಾರಿಯಾಗಿ ಕೆಲಸ ಮಾಡುವಂತೆ ಎಂಬುದನ್ನು ನಿಷ್ಕರಿಸಲಾಗುವುದು. ಅಂತೆಯೇ ಸರ್ಕಾರವು ಈ ವಿಷಯವನ್ನು ಪರಿಶೀಲಿಸುವುದು.

LIST OF HORTICULTURAL FARMS AND NURSERIES IN KARNATAKA (TALUK-WISE)

NAMES OF HORTICULTURAL FARMS AND NURSERIES AND EXTENT

Bangalore District	Acres
1. *Devanahalli Taluk*	
(*a*) Horticultural Nursery, Devanahalli	1·32
(*b*) Horticultural Farm, K. Poojenahalli	57·00